177

ಮಂಗಳ-ಅಮಂಗಳ

(ಒಂದು ನೀಳ್ಗತೆ)

•

ಲೇಖಕಿ:

ಶ್ರೀಮತಿ ಪಿರ್ಯ ಚಂದ್ರಭಾಗಿ ಕೃ. ರೈ.

1958.

ಒಂದಾಣೆ ಮಾಲೆ

ಮಂಗಳ-ಅಮಂಗಳ

ಬೇಸಿಗೆಯ ದಿನಗಳಲ್ಲಿ ಅಡ್ಡಿ ಆತಂಕಗಳಿಲ್ಲದೆ ಉಜ್ವಲ ಪ್ರಕಾಶದಿಂದ ಬೆಳಗುತ್ತಿದ್ದ ಭಾನು, ಇಂದು ಮಲಿನಾವಸ್ಥೆಗೆ ಬಂದಿದ್ದಾನೆ. ವರ್ಷಾಕಾಲದ ಮೊದಲ ದಿನಗಳು; 'ಇಷ್ಟರ ವರೆಗೆ ಬೇಸಿಗೆಯ ಅಧಿಕಾರದ ದಿನಗಳಾದರೂ, ಇನ್ನು ಮುಂದೆ ನನ್ನ ದಿನಗಳು, ಎನ್ನುವಂತೆ ಮಳೆಗಾಲವು ಸಂಭ್ರಮದಿಂದ ಹೊರಟುನಿಂತಿದೆ. ತಮ್ಮೊಡೆಯನ ಬರುವಿಕೆಗಾಗಿ ಬೆಳಗಿದ ಶುಭದೀವಟಿಗೆಯಂತೆ ಮಿಂಚು ಮಿಂಚುತಿತ್ತು. ಅಬ್ಬರದ ಭೇರಿ ಎಂಬಂತೆ ಗುಡುಗು ಗುಡುಗುತಿತ್ತು. ವರ್ಷರಾಜನ ಧ್ವಜಗಳಂತೆ ಕರಿಮೋಡಗಳು ಇತ್ತಿಂದತ್ತ ಅತ್ತಿಂದಿತ್ತ ತೇಲಾಡುತ್ತಿದ್ದವು. ಚಾಮರದೋಪಾದಿ ಗಾಳಿ ಬೀಸುತ್ತಿತ್ತು.

ಮನೆಯ ಕೋಣೆಯೊಂದರಲ್ಲಿ ಕುಳಿತು, ಕಿಟಿಕಿಯಿಂದ ಆಕಾಶವನ್ನೇ ದಿಟ್ಟಿಸುತ್ತಿದ್ದಳು ಇಂದು. ಹೆಸರು 'ಇಂದು'; ಆಕೆಯ ಮುಖ ಮಾತ್ರ ಕಂದಿತ್ತು. ಸೂರ್ಯನಿಗೆ ಕರಿ ಮೋಡಗಳು ಅಡ್ಡಬಂದಿದ್ದವು; ಇಂದುವಿಗೆ ವೈಧವ್ಯದ ಘೋರಪ್ರಕರಣ ಅಡ್ಡಬಂದಿತ್ತು. ಕಳೆದ ದಿನಗಳ ನೆನಪು ತೆರೆ ತೆರೆಯಾಗಿ ತಲೆಯಲ್ಲಿ ಸುಳಿಯತೊಡಗಿತು.

ಮದುವೆಯಾಗಿ ಮೂರು ವರ್ಷಗಳವರೆಗೆ ಗಂಡನೊಂದಿಗೆ ನಕ್ಕು, ನಲಿದಿದ್ದಳು. ಸದ್ಯಕ್ಕೆ 'ಟ್ರಾನ್ಸ್‌ಫರ್'(ವರ್ಗ)ಆಗಿ ಪತಿ ಮುಂಬಯಿ ಸೇರಿದ್ದಾನೆ. ಒಂದು ಮಗುವಾಗಿ ತಿಂಗಳೊಂದಾಗುತ್ತ ಬರುತಿತ್ತು. ಮುಂಬಯಿಯಲ್ಲಿದ್ದ ಇಂದುವಿನ ಪತಿಯಿಂದ ಪತ್ರ ಬಂತು: "........ನೀನು ಮತ್ತು ಮಗು ಭಗವಂತನ ಕೃಪೆಯಿಂದ ಕ್ಷೇಮದಲ್ಲಿರುವಿರೆಂಬುದನ್ನು ಕೇಳಿ ಸಂತೋಷಪಟ್ಟೆ. ನಿನ್ನನ್ನು ಮತ್ತು ಪುಟ್ಟ ಮಗುವನ್ನು ನೋಡುವರೆ ಮನಸ್ಸು ಹಾತೊರೆಯುತ್ತಿದೆ. ರಜೆಗೆ ಅರ್ಜಿಹಾಕಿದ್ದೇನೆ. ಐದಾರು ದಿನಗಳಲ್ಲೇ ನಿನ್ನ ಬಳಿಯಲ್ಲಿರುವೆನು........ಇತಿ, ನಿಮ್ಮೆಲ್ಲರನ್ನು ಹರಸುವ ಪ್ರಕಾಶ."

ಪತಿಯ ಪತ್ರವನ್ನು ಒಂದು ಸಲ ಓದಿದಳು; ಸಾಕಾಗಲಿಲ್ಲ, ಇನ್ನೊಮ್ಮೆ, ತಿರುಗೊಮ್ಮೆ, ಓದಿದಳು. ಆ ಮೇಲೆ ತಲೆದಿಂಬಿನ ಅಡಿಯಲ್ಲಿ ಇಟ್ಟಳು.

"ಅವ್ವಾ, ನಿನ್ನ ಅಳಿಯ ಬರುತ್ತಾರಂತೆ. ನನ್ನ ಕೆಲಸದಲ್ಲೇ ಇದ್ದೀಯಾ! ಕೆಲವು ತಿಂಡಿತಿನಸುಗಳನ್ನು ಮಾಡಿಸು. ಮುಂಬಯಿ ಪೇಟೆಯ ನೆಲೆಕಡಲೆ ಎಣ್ಣೆಯ ತಿಂಡಿ ತಿಂದು ಸಾಕಾಗಿರಬಹುದು, ಕೆಲವೇ ದಿನಗಳಾದರೂ ಇಲ್ಲಿ ತುಪ್ಪದ ತಿಂಡಿ ತಿನ್ನಲಿ" ಎಂದಳು. ಎಳೆಮಗುವಿನ ಬಿಳಿ ಮತ್ತು ಕೆಂಪು ಮಿಶ್ರ ಮುಖವನ್ನು ಚುಂಬಿಸಿದಳು. "ನೋಡು, ಅಪ್ಪ ಬರುತ್ತಾರಂತೆ. ನಿನ್ನ ತಂಟೆಗಳನ್ನೆಲ್ಲ ಅವರೊಡನೆ ಹೇಳುತ್ತೇನೆ" ಎಂದಳು. ಪಾಪ, ಒಂದು ತಿಂಗಳು ಕೂಡ ಆಗಿರದ ಆ ಮಗು ಏನು ತಂಟೆ ಮಾಡೀತು? ಆದರೂ ಸಂತೋಷ-ಪ್ರೇಮಗಳ ಭರದಲ್ಲಿ ಏನೇನೋ ಹರಟುತ್ತ, ಪತಿಯ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದಳು.

ಪತ್ನಿಗೆ ಕಾಗದ ಬರೆಯುವಾಗಲೇ ತಲೆ ಸಿಡಿಯುತ್ತಿದ್ದ ಪ್ರಕಾಶನಿಗೆ, ಮರುದಿನ ಜ್ವರ ಏರಿತು. ಸ್ನೇಹಿತರು ಪ್ರಕಾಶನ ಪರಿಸ್ಥಿತಿಯನ್ನು ನೋಡಿ, ಡಾಕ್ಟರರನ್ನು ಕರೆಸಿ ಮದ್ದು ಮಾಡಿದರು. ಯಾವ ಡಾಕ್ಟರರು ಬಂದರೇನು, ಕಾಲನ ಕರೆಗೆ ಓಗೊಡಲೇಬೇಕಲ್ಲವೇ? ಇಂದುವಿನ ಹೃದಯದ ಅಧಿದೇವತೆಯು ಇಂದುವಿನೆಡೆಗೆ ಬಾರದೆ ಯಮರಾಯನ ಸದನಕ್ಕೆ ಪಯಣ ಬೆಳೆಸಿದನು.

ಇತ್ತ ಇಂದು, ಪತಿ ಇವತ್ತು ಬಂದಾನು ನಾಳೆ ಬಂದಾನು ಎಂಬ ನಿರೀಕ್ಷೆಯಲ್ಲಿ ದಾರಿಕಾಯುತ್ತಿದ್ದಳು. ಆಗಲೇ ಪ್ರಕಾಶನ ಸ್ನೇಹಿತರಿಂದ ತಂತಿ ಬಂತು: "ಪ್ರಕಾಶನು ಪರಲೋಕಕ್ಕೆ ಪ್ರಯಾಣಬೆಳಸಿದನು" ಎಂದು. ಈ ವಾರ್ತೆಯನ್ನು ಬಾಣಂತಿಗೆ ತಿಳಿಯದಂತೆ ಬಚ್ಚಿಟ್ಟರು. ನಿತ್ರಾಣವಿರುವಾಗ ಇಂದುವಿನ ಸ್ಥಿತಿ ಕಠಿಣವಾದೀತು ಎಂಬ ಅಭಿಪ್ರಾಯದಿಂದ. "ಪ್ರಕಾಶನಿಗೆ ಕಾಯಿಲೆ ಎಂದು ತಾರು ಬಂತು" ಎಂದು ಇಂದುವಿನ ತಾಯಿ ಅಳುತ್ತಿದ್ದಳು. ಇಡೀ ಮನೆಯೇ ಸ್ಮಶಾನಮೌನದಲ್ಲಿತ್ತು. ಈ ದೃಶ್ಯವನ್ನು ನೋಡಿಯೇ ಇಂದು ಕಂಗಾಲಾದಳು. ಹಲವು ದೇವಸ್ಥಾನದ ಹಲವಾರು ಹೆಸರುಗಳ ದೇವರಿಗೆ ಹರಕೆ ಹೊತ್ತಳು. "ದೇವಾ, ನನ್ನ ಕುಂಕುಮವನ್ನು ಉಳಿಸು" ಎಂದು ಮೊರೆಯಿಡುವಳು. ಕುಂಕುಮದ ಅಧಿದೇವತೆ ಅಳಿದು ದಿನ ಮೂರಾದರೂ, ಇಂದು ಕುಂಕುಮವನ್ನು ಬಹುಜಾಗ್ರತೆಯಲ್ಲೇ ಉಳಿಸುತಿದ್ದಳು. ಮುಖ ತೊಳೆಯುವಾಗ, ಸ್ನಾನಮಾಡುವಾಗ ಹಣೆಗೆ ನೀರು ಮುಟ್ಟಿಸುತ್ತಿರಲಿಲ್ಲ. ಪತಿಯು ಕಾಯಿಲೆಯಲ್ಲಿರುವಾಗ ಕುಂಕುಮ ಒರೆಸಿ

ಅವಮಂಗಲವಮಾಡಬಾರದೆಂಬ ವಿಶೇಷ ಎಚ್ಚರಿಕೆ! ಎಷ್ಟು ದಿನ ಬಚ್ಚಿಡಬಹುದು? ಕಡೆಗೊಂದು ದಿನ ತಿಳಿಯಿತು. ಮುಂದಿನ ಸಂಗತಿ ಕೇಳಬೇಕೇ? ಪತಿಯೇ ಪರದೈವವೆಂದು ನಂಬಿರುವ ಹಿಂದೂರಮಣಿಯ ಮನದ ಸ್ಥಿತಿಯನ್ನು. ಅವಳೇ ಅಥವಾ ಅವಳಂತೆ ನೊಂದವರೇ ಅರಿಯಬೇಕಲ್ಲದೆ ಇತರರು ಅರಿಯರು. ಬಹಳ ಜಾಗ್ರತೆಯಿಂದ ಉಳಿಸಿದ ಕುಂಕುಮ ಅಳಿಯಿತು, ಕಂಕಣ ಮುರಿಯಿತು, ಕರಿಮಣಿ ಕಡಿಯಿತು, ಹೃದಯ ಒಡೆಯಿತು. ಅತ್ತಳು, ಅತ್ತಳು, ಕೆಲದಿನಗಳ ವರೆಗೆ ರಾತ್ರಿಹಗಲು ಅತ್ತಳು.

ದಿನಗಳುರುಳಿದವು. ಇಂದುವಿನ ದುಃಖದ ಆವೇಗ ಕಡಿಮೆಯಾಗತೊಡಗಿತು; ಅದರ ಪಡಿನೆಳಲು ಮಾತ್ರ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿತು. ಮನೆಯ ಕೆಲಸಗಳನ್ನು ಮಾಡತೊಡಗಿದಳು. ಯಂತ್ರದಂತೆ ಕೈಕಾಲುಗಳು ದುಡಿಯುತ್ತಿದ್ದುವಲ್ಲದೆ ಹೃದಯ ಮಾತ್ರ ಮಿಡಿಯುತ್ತಿತ್ತು. ಮಗುವನ್ನು ನೋಡಿದಾಗಲೆಲ್ಲ ಕಣ್ಣೀರು ಇಳಿಯುತಿತ್ತು. ಒಮ್ಮೆ "ಮಗೂ, ನಿನ್ನ ಆಟಪಾಟಗಳನ್ನು ನೋಡಲು ನಿನ್ನ ಅಪ್ಪ ಇದ್ದಿದ್ದರೆ ಎಷ್ಟು ಸಂತೋಷಪಡುತ್ತಿದ್ದರೋ! ನಿನ್ನನ್ನೊಮ್ಮೆ ಕಣ್ಣಿನಿಂದ ಕೂಡ ನೋಡಲಿಲ್ಲವಲ್ಲ!" ಎಂದು ಮರುಗುವಳು. ಇನ್ನೊಮ್ಮೆ "ನನ್ನನ್ನೇಕೆ ಒಯ್ಯಲಿಲ್ಲ ದೇವಾ? ನಾನೊಬ್ಬಳು ನಿನಗೆ ಬೇಡವಾದೆನೇ? ಅವರು ಮಾತ್ರ ಬೇಕಾದರೇ?" ಎಂದು ಅಳುವಳು.

o o o o

ಮಳೆಗಾಲದ ದಿನಗಳು ಬಂತೆಂದರೆ ಎಲ್ಲರಿಗೂ ಬೇಸರವೇ. ಆ ಬೇಸರವಂತೂ ಇಂದುವಿಗೆ ಮಾತ್ರ ದ್ವಿಗುಣಿತವಾಗಿತ್ತು. "ಕಾಲಚಕ್ರದ ಉರುಳುವಿಕೆಯನ್ನೇನು ಹೇಳಲಿ. ಈ ಸೂರ್ಯನಂತೆ ನಾನು ಪತಿಯಿದ್ದ ಕಾಲದಲ್ಲಿ ಸಂತೋಷದಿಂದ ಬೆಳಗಲಿಲ್ಲವೇ? ಸೂರ್ಯನಾದರೋ ಮಳೆಗಾಲದ ಕಾರ್ಮೋಡ ಚದರಿದ ಕೂಡಲೇ ಪುನಃ ಪ್ರಕಾಶಿಸುವನು. ನನ್ನ ಮೇಲೆ ಹರಡಿರುವ ವೈಧವ್ಯವೆಂಬ ಮೋಡವು ನನ್ನ ಅಂತ್ಯದ ವರೆಗೂ ಚದರುವಂತಹದ್ದಲ್ಲ" ಎಂದು ಏನೇನೋ ಯೋಚಿಸುತ್ತ, ಹೊರಗಿನ ವಾತಾವರಣವನ್ನೇ ಕಿಟಕಿಯಿಂದ ಈಕ್ಷಿಸುತ್ತಿದ್ದಳು. ಜಳಕ್ಕನೆ ಮಿಂಚೊಂದು ಮಿಂಚಿತು. ಗತಕಾಲದ ಯೋಚನೆಯಲ್ಲೇ ಮಗ್ನಳಾದ ಇಂದುವಿಗೆ

ತನ್ನ ಮಗು ಆಡಲಿಕ್ಕೆ ಹೊರಗೆ ಹೋದುದು ನೆನಪಾಯಿತು. ಜಗ್ಗನೆ ಎದ್ದು ಓಡಿದಳು. ಅಂಗಳದಲ್ಲಿ ತಟಪಟನೆ ಉರುಳುತ್ತಿದ್ದ ಹನಿಮಳೆ, ಮಿಂಚು, ಗುಡುಗುಗಳನ್ನು ನೋಡಿ, ಮಗು ಸತೀಶನು ಆಚೆ ಈಚೆ ನೋಡುತ್ತಾ ಸಂತೋಷದಿಂದ ಓಡುತ್ತಿದ್ದನು. ಮಗುವಿನೆಡೆಗೆ ಓಡಿ, ಎತ್ತಿ ಎದೆಗೆ ಅವಚಿಕೊಂಡು ಒಳಗೆ ಬಂದಳು. "ಮಗೂ ಮಳೆ—ಗುಡುಗು-ಮಿಂಚುಗಳಿವೆ. ಹೊರಗೆ ಹೋಗಬೇಡ. ಶೀತ ಬಂದೀತು!" ಎಂದಳು.

"ಅಮ್ಮಾ, ಮೊನ್ನೆ ಬಹಳ ಗದ್ದಲದಿಂದ ಸೀತ ಬಂದು ಸೇಸನಿಗೆ ಮದುವೆಯಾದದ್ದಲ್ಲವೇ? ಇನ್ನು ಯಾವ ಸೀತ ಬರುತ್ತಾಳೆ? ಅವಳನ್ನು ಯಾರಿಗೆ ಮದುವೆಯಾಗುವುದು?" ಎಂದು ಕೇಳಿದನು ಸತೀಶ. ಕೆಲವು ದಿನಗಳ ಹಿಂದೆ ನೆರೆಮನೆಯ ಸೇಸನಿಗೆ ಬೇಂಡು-ವಾದ್ಯ, ಗರ್ನಾಲುಗಳ ಸಂಭ್ರಮದೊಡನೆ ದಿಬ್ಬಣ ಬಂದು, ಸೀತನನ್ನು ಮದುವೆಯಾಗಿತ್ತು. ಅದನ್ನು ಸತೀಶ ನೋಡಿದ್ದನು. ಈಗ ಗುಡುಗು, ಮಿಂಚು, ಗಾಳಿಗಳ ಸಂಭ್ರಮ ನಡೆದಿದೆ, ಅದರೆಡೆಯಲ್ಲಿ ತಾಯಿ ಬಂದು "ಶೀತ ಬಂದೀತು" ಎನ್ನುತ್ತಾಳೆ. ಇನ್ನೊಬ್ಬಳು ಸೀತಳ ದಿಬ್ಬಣವೋ ಎಂದು ಸತೀಶನ ಯೋಚನೆ. ಮಗುವಿನ ಮಾತನ್ನು ಕೇಳಿ ಇಂದುವಿನ ಕಳೆಗುಂದಿದ ಮುಖದಲ್ಲಿ ನಗುಮೂಡಿತು. ತಾಯಿ ಜಾನಕಮ್ಮನನ್ನು ಕರೆದು, "ಅಮ್ಮಾ ಕೇಳಿದೆಯಾ ನಿನ್ನ ಮೊಮ್ಮಗನ ಸುದ್ದಿ?" ಎಂದು, ಮಗು ಹೇಳಿದುದನ್ನು ವಿವರಿಸಿದಳು. ಅಜ್ಜಿಯೂ ನಕ್ಕಳು. ಮಗಳ ಮುಖದಲ್ಲಿ ನಗೆ ಮೂಡಿದುದನ್ನು ನೋಡಿ ತಾಯಿಗೆ ಹರ್ಷವಾಯಿತು. ದುಃಖವೆಂಬ ಕಾರ್ಮೋಡ ಕವಿದ ಮಗಳ ಮುಖಕ್ಕೆ ಈ ಮಗುವಾದರೂ ಒಂದು ಬೆಳಕಾಯಿತಲ್ಲ ಎಂದು ಯೋಚಿಸಿದಳು ಜಾನಕಮ್ಮ.

ಮಗುವನ್ನು ಕೆಳಗಿಳಿಸಿ ತಾಯಿಮಗಳಿಬ್ಬರೂ ಅಡಿಗೆಕೋಣೆಗೆ ಹೋದರು. ಸತೀಶನು ಜಗಲಿ ಮೇಲೆ ನಿಂತು ಹೊರಗಿನ ಗದ್ದಲಕ್ಕೆ ಸಂತೋಷಪಡುತ್ತಿದ್ದನು.

ಗಾಳಿಯೂ ಇನ್ನೂ ಜೋರಾಗಿ ಬೀಸತೊಡಗಿತು. ಮಳೆಯೂ ಧಾರಾಕಾರವಾಗಿ ಸುರಿಯಿತು. ಆ ಜಡಿಮಳೆಯಲ್ಲಿ ನಡುಗುತ್ತ ನಡುಗುತ್ತ ಸುಮಾರು ಎಪ್ಪತ್ತು ವರ್ಷ ಪ್ರಾಯದ ಮುದುಕ ತುಕ್ರನು, ತನಗೆ ಸಾಧ್ಯವಿದ್ದಷ್ಟು ಬೇಗನೆ ಹೆಜ್ಜೆಗಳನ್ನಿಡುತ್ತ ಬಂದು, ಮೆಟ್ಟಿಲಲ್ಲಿ ನಿಂತನು.

ಸತೀಶನು ಮುದುಕನನ್ನು ನೋಡುತ್ತಲೇ ಹೆದರಿ ಒಳಗೆ ಓಡಿ ಬಂದು, "ಅಮ್ಮಾ, ಹೊರಗೊಬ್ಬ ಗುಮ್ಮ ಬಂದಿದ್ದಾನೆ! ಅವನ ಬಳಿ ಜೋಳಿಗೆಯಿದೆ. ಅದರಲ್ಲಿ ಮಕ್ಕಳನ್ನು ತುಂಬಿಸಿದ್ದಾನೋ ಏನೋ!" ಎಂದು ತಾಯಿಯನ್ನು ಅಪ್ಪಿಹಿಡಿದನು. ಇಂದುವು ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು, ಹೊರಗೆ ಬಂದು, ಮುದುಕನು ಒದ್ದೆಯಾಗಿ ಮೆಟ್ಟಲಲ್ಲಿ ನಿಂತುದನ್ನು ಕಂಡಳು. "ನೀನ್ಯಾಕೆ ಅಲ್ಲಿ ನಿಂತಿದ್ದಿ ಅಜ್ಜಾ?" ಎಂದು ಕೇಳಿದಳು.

"ಇಲ್ಲವಮ್ಮಾ, ಮಳೆ ಬಿಟ್ಟಕೂಡಲೇ ಹೋಗುತ್ತೇನೆ. ಬೇಡಲಿಕ್ಕೆ ಹೊರಟಿದ್ದೆ. ಮಳೆಬಂತು, ಓಡಲಿಕ್ಕಾಗದೆ ಒದ್ದೆಯಾದೆ. ಸ್ವಲ್ಪ ಹೊತ್ತು ಈ ಮೆಟ್ಟಲಲ್ಲಿ ನಿಲ್ಲುತ್ತೇನೆ, ಆ ಮೇಲೆ ಹೋಗುವೆನು."

"ಹಾಗಲ್ಲ ಅಜ್ಜ, ಒಳಗೆ ಬಾ. ಅಲ್ಲಿ ಮಳೆಹನಿಗಳು ಬೀಳುತ್ತವೆ. ಮೊದಲೇ ಒದ್ದೆಯಾಗಿದ್ದಿ. ಒಂದು ಹರಕು ಬಟ್ಟೆ ತುಂಡು ಕೊಡುವೆನು. ಅದನ್ನು ಉಟ್ಟು ಒದ್ದೆಯನ್ನು ಹಿಂಡು." ಎಂದು ಒಂದು ಬಟ್ಟೆ ತುಂಡು ತಂದುಕೊಟ್ಟಳು.

ತಾಯ ಕಂಕುಳಲ್ಲಿ ಕುಳಿತ ಸತೀಶನು "ಬೇಡಮ್ಮಾ, ಅವನ ಸಮೀಪಕ್ಕೆ ಹೋಗಬೇಡ, ಅವನಿಗೆ ಏನೂ ಕೊಡಬೇಡ. ಅವನನ್ನು ಓಡಿಸು, ನಮ್ಮನ್ನು ನುಂಗುತ್ತಾನೆ. ಅಜ್ಜಿಗೆ ನೀನು ಬೇಡವೇ? ನಿನಗೆ ನಾನು ಬೇಡವೇ? ಬೇಗ ಒಳಗೆ ಹೋಗು" ಎಂದು ತಾಯಿಯನ್ನು ಅವಚಿಕೊಂಡನು.

"ಅಲ್ಲ ಮಗೂ, ಅವನು ಗುಮ್ಮನಲ್ಲ, ಅಜ್ಜ. ಪಾಪದ ಮುದುಕ, ನಾವೂ ಅವನಷ್ಟು ಕಾಲ ಬದುಕಿದರೆ ಹಾಗಾಗುವೆವು!"

"ಬೇಡ! ಬೇಡ! ನೀನು ಬೇಕಾದರೆ ಆಗು, ನಾನು ಹಾಗೆ ಆಗುವುದಿಲ್ಲ."

"ಆಗಲಿ ಮಗೂ, ನೀನು ಮುದುಕನಾಗುವುದು ಬೇಡ. ಚಿರಂಜೀವಿಯಾಗು."

"ಯಾಕಮ್ಮಾ ನಾನು ಸಂಜೀವಿ? ಸತೀಶನಲ್ಲವೇ? ಸಂಜೀವಿ ಕೆಳಗಿನ ಮನೆಯಲ್ಲಿದ್ದಾಳೆ"

ಮಗುವಿನ ಮಾತಿಗೆ ನಗಾಡುತ್ತಾ, "ನಿನ್ನೊಡನೆ ಮಾತಾಡಲು ನನಗೆ ತಿಳಿಯದು ಮಗೂ" ಎನ್ನುತ್ತ, ಮುದುಕನು ನಡುಗುವುದನ್ನು ನೋಡಿ

ಒಳಗೆ ಹೋಗಿ, ಒಂದು ಲೋಟ ಬಿಸಿ ಬಿಸಿ ಕಾಫಿ ತಂದುಕೊಟ್ಟಳು. ತುಕ್ರನು ಕಾಫಿಯನ್ನು ಕುಡಿದನು. ಚಳಿಗೂ ಹಸಿವೆಗೂ ಹಿತವಾಯಿತು. 'ಅಮ್ಮಾ, ದೇವರು ನಿಮಗೆ ಒಳ್ಳೆಯದು ಮಾಡಲಿ' ಎಂದು ತುಂಬಿದ ಹೃದಯದಿಂದ ಹರಸಿದನು.

"ಅಜ್ಜಾ, ದೇವರು ನನಗೆ ಮಾಡುವ ಒಳಿತನ್ನೆಲ್ಲಾ ಮಾಡಿದ್ದಾನೆ. ಇನ್ನು ನನಗೆ ಯಾವ ಒಳಿತಿನ ಆಶೆಯೂ ಇಲ್ಲ. ಈ ಮಗು ಮಾತ್ರ ಆರೋಗ್ಯದಿಂದಿದ್ದರೆ ಸಾಕು." ಎನ್ನುವಾಗಲೇ ದೈನಂದಿನ ಬರುವ ಕಣ್ಣೀರು ಆಗಲೂ ತುಂಬಿಬಂತು. ಅದನ್ನು ಕಾಣದಂತೆ ಒರಸಲು ಒಳಗೆಹೋದಳು.

ಇಂದುವು ಹೇಳಿದ ಮಾತನ್ನು ಕೇಳಿ ಮುದುಕ ತುಕ್ರನಿಗೂ ತಾಯಿ ಹೃದಯದ ನೆನಪು ಮರುಕಳಿಸಿತು. ಅವನೂ ಅವನ ಹೆಂಡತಿಯೂ ಮಕ್ಕಳಿಗಾಗಿ ಪಟ್ಟ ಕಷ್ಟ, ಹೊಂದಿದ ಬವಣೆಗಳೆಲ್ಲಾ ಒಂದೊಂದಾಗಿ ಕಣ್ಣ ಮುಂದೆ ಸುಳಿಯತೊಡಗಿತು. ಇಂದುವಿಗಾದರೋ ಕೂತಲ್ಲೇ ಉಣುವಷ್ಟು ಹಿರಿಯರ ಆಸ್ತಿ ಇತ್ತು. ತುಕ್ರನು ದಿನಕೂಲಿಗಾಗಿ ದುಡಿಯುವವ. ಅವನ ಶರೀರವೇ ಅವನ ಆಸ್ತಿ. ಮೈಮುರಿದು ದುಡಿದು ಅವನ ಹೆಂಡತಿ ಕೊರಪ್ಪೊಳು, ನಾಲ್ವರು ಮಕ್ಕಳನ್ನು ಸಾಕಿದ್ದಳು. ಆ ಮಕ್ಕಳ ಅಭಿವೃದ್ಧಿಗಾಗಿ ಅವನ ಹೆಂಡತಿ, ಇಂದುವಿನಂತೆಯೇ ಕಾತರಿಸುತ್ತಿದ್ದ ದಿನಗಳು, ತಮಗೆ ಹೊಟ್ಟೆಗಿಲ್ಲದಿದ್ದರೂ ಮಕ್ಕಳಿಗೆ ಬಡಿಸಿ ಅವರು ಉಪವಾಸ ಮಲಗಿದ್ದುದು, ಮಕ್ಕಳ ಕಾಯಿಲೆಗಾಗಿ ಪಟ್ಟ ಬವಣೆ ಎಲ್ಲವೂ ನೆನಪಾಗತೊಡಗಿತು. ಆದೇ ಮಕ್ಕಳು ಈಗ ದೊಡ್ಡವರಾಗಿದ್ದಾರೆ, ತಂದೆ ಮುದುಕನಾಗಿದ್ದಾನೆ; ತಾಯಿ ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ರೋಗಕ್ಕೆ ಔಷಧಿಯಿಲ್ಲದೆ ಸತ್ತುಹೋಗಿದ್ದಾಳೆ. ಮುದುಕನನ್ನು ಕಣ್ಣಿನಲ್ಲಿ ನೋಡಲಿಕ್ಕೂ ಮಕ್ಕಳು ಅವಮಂಗಳ ಎಂದು ಬಗೆಯುತ್ತಾರೆ. ಇವೆಲ್ಲ ಯೋಚನೆಗಳು ಮುದುಕನ ತಲೆಯಲ್ಲಿ ತಿರುಗತೊಡಗಿದುವು.

ಒಳಗೆ ಹೋದ ಇಂದುವು ಹೊರಗೆ ಬರುವಾಗ ಜಗಲಿ ಮೂಲೆಯಲ್ಲಿ ಮುದುಡಿ ಕೂತ ಮುದುಕನ ಕಣ್ಣಿನಲ್ಲಿ ನೀರಾಡುತ್ತಿತ್ತು. ಅದನ್ನು ನೋಡಿ ಇಂದುವಿಗೆ ಕನಿಕರವಾಯಿತು. 'ಅಜ್ಜಾ, ನಿನಗೆ ಮಕ್ಕಳಿಲ್ಲವೇ? ಮಡದಿ ಇಲ್ಲವೇ?' ಎಂದು ಕೇಳಿದಳು. ಸ್ವಲ್ಪ ಹೊತ್ತು ಮೌನ, ಆ ಮೇಲೆ ಮುದುಕನು ತಲೆಯೆತ್ತಿ, "ಅಮ್ಮಾ, ಮಡದಿ ತೀರಿಹೋಗಿರುವಳು; ಮಕ್ಕಳು ಒಂದಲ್ಲ, ಎರಡಲ್ಲ, ನಾಲ್ಕು ಮಂದಿ ಇದ್ದಾರೆ!" ಎಂದನು.

"ಹ್ಞಾಂ! ನಾಲ್ಕು ಮಂದಿಯೋ? ಹಾಗಾದರೆ ನೀನೇಕೆ ಈ ವಯಸ್ಸಿನಲ್ಲಿ ಬೇಡಲಿಕ್ಕಾಗಿ ತಿರುಗುವೆ?"

"ಏನು ಹೇಳಲವ್ಮಾ, ದೇವರು ನನ್ನ ಹಣೆಯಲ್ಲಿ ಹಾಗೆ ಬರೆದಿರುವಾಗ ಅದನ್ನು ಅಳಿಸಿಬಿಡಲು ಯಾರಿಂದ ಸಾಧ್ಯ?"

"ನಿನ್ನ ಮಕ್ಕಳೆಲ್ಲಿದ್ದಾರೆ?"

"ಇಬ್ಬರು ಹೆಣ್ಣುಮಕ್ಕಳು ಗಂಡನಮನೆಯಲ್ಲಿದ್ದಾರೆ. ಒಬ್ಬ ಮಗ ನಾನಿರುವ ಮನೆಯಲ್ಲಿ ಇದ್ದಾನೆ. ಇನ್ನೊಬ್ಬ ನಮ್ಮ ಮನೆಯಿಂದ ಎರಡು ಮೈಲುಗಳ ಆಚೆ ಇದ್ದಾನೆ. ಎಲ್ಲರಿಗೂ ಮದುವೆಮಾಡಿದ್ದೇನೆ; ಮಕ್ಕಳೂ ಆಗಿವೆ."

"ಹಾಗಾದರೆ ನೀನು ಮಗನ ಮನೆಯಲ್ಲಿ ಇರುವೆಯಲ್ಲವೆ?"

"ಹೌದಮ್ಮ, ಆದರೆ ಅವನು ಅವನಷ್ಟಕ್ಕೆ—ನಾನು ನನ್ನಷ್ಟಕ್ಕೆ."

"ಮಗನ ಮನೆಯಲ್ಲಿ ಇರುವೆ ಎನ್ನುತ್ತೀ, ಅವನು ಅವನಷ್ಟಕ್ಕೆ—ನೀನು ನಿನ್ನಷ್ಟಕ್ಕೆ ಎನ್ನುತ್ತಿ! ಮತ್ತೇನಾಗಬೇಕು? ನೀನು ಮತ್ತು ಅವನು ಒಬ್ಬರಿಗೊಬ್ಬರು ಅಂಟಿಕೊಂಡಿಲ್ಲವೆಂದೇ? ಈ ಬೇಡುವ ವರ್ಗವೇ ಹೀಗೆ, ಸತ್ಯ ಮಾತಾಡುವುದೆಂದಿಲ್ಲ."

"ಕೋಪಿಸಬೇಡಿರವ್ಮಾ, ನಿಮಗೆ ಹೀಗೆ ಬೇಡುವವರು ಸುಳ್ಳುಹೇಳುವುದನ್ನು ಕೇಳಿ ಕೇಳಿ ಸಾಕಾಗಿದೆ. ನಾನೂ ಆ ಅನುಭವವನ್ನು ಬಲ್ಲೆ. ಆದರೆ, ಎಲ್ಲರಂತೆ ನಾನಲ್ಲ. ನಾನೆಂದಿಗೂ ಸುಳ್ಳು ಹೇಳಲಾರೆ. ಕೇಳಿ. ನನ್ನ ದೌರ್ಭಾಗ್ಯವನ್ನು ಹೇಳಲಿಕ್ಕೆ ನನಗೇ ನಾಚಿಕೆಯಾಗುತ್ತದೆ. ಆದರೂ ದಯಾಮಯಿಯಾದ ನಿಮ್ಮೊಡನೆ ಹೇಳುತ್ತೇನೆ. ಅವ್ಮಾ, ನಾನು ನಿಮಗೆ 'ದೇವರು ಒಳ್ಳೇದು ಮಾಡಲಿ' ಎಂದಾಗ, ನೀವು, 'ನನಗೇನಾಗಬೇಕು? ಮಗು ಆರೋಗ್ಯದಿಂದಿದ್ದರೆ ಸಾಕು' ಎಂದಿರಿ. ಆ ಮಾತು ಕೇಳಿ ನನಗೂ ನನ್ನ ಯೌವನದ ನೆನಪುಗಳು ಮರುಕಳಿಸಿದುವು. ನಾನು ಮತ್ತು ನನ್ನ ಹೆಂಡತಿ ನಿಮ್ಮಂತೆಯೇ ಮಕ್ಕಳನ್ನು ಬಹು ಜೋಪಾನದಿಂದ ಸಾಕಿದ್ದೆವು. ದೇವರು ಹೊಟ್ಟೆಗೂ ಬಟ್ಟೆಗೂ ಬಡತನ ಕೊಟ್ಟಿದ್ದ, ಆದರೆ ನಮ್ಮಲ್ಲಿ ಪ್ರೀತಿಗೆ ಮಾತ್ರ ಬರಗಾಲ ಇರಲಿಲ್ಲ. ಎಷ್ಟೋ ದಿನಗಳು ನಾವು ಉಪವಾಸ ಮಲಗಿ ಮಕ್ಕಳನ್ನು ಉಣಿಸಿದ್ದೆವು. ನನ್ನ ಹೆಂಡತಿಗೆ ಕಾವಿಬಟ್ಟೆ ಧರಿಸಿದವರೆಂದರೆ ಬಹಳ ಭಕ್ತಿ. ಒಂದು ದಿನ ಒಬ್ಬ ಸನ್ಯಾಸಿ ನಮ್ಮ ಮನೆಗೆ ಬಂದನು. ನಾವು

ಬಡವರಾದರೂ ಅವನಿಗೆ ಇದ್ದುದನ್ನು ಇಕ್ಕಿದಳು. ಆ ಮೇಲೆ ಮಕ್ಕಳನ್ನು ಆ ಸನ್ಯಾಸಿಯ ಕಾಲಿಗೆ ಅಡ್ಡ ಬೀಳಿಸಿ, 'ಸ್ವಾಮಿ, ನಮಗಿರುವ ದಾರಿದ್ರ್ಯ ದುಃಖ ಇವರಿಗೆ ಬಾರದಿರಲಿ ಎಂಬಂತೆ ಹರಸಿರಿ' ಎಂದು ಬೇಡಿಕೊಂಡಳು. ಹೆಂಗಸರ ಹುಚ್ಚು ಭ್ರಾಂತಿ! ಅವನೂ 'ಹಾಗೇ ಆಗಲಿ' ಎಂದನು. ನಿಮ್ಮ ಮಾತು ಕೇಳಿ ನನಗೂ ನನ್ನ ಹೆಂಡತಿಯ ನೆನಪು ಬಂತು. ಇನ್ನೊಮ್ಮೆ ನನ್ನ ಸಣ್ಣ ಮಗನಿಗೆ ಸನ್ನಿಪಾತ ಜ್ವರ ಬಂದು ಮಾತು ಕೂಡ ನಿಂತು ಹೋಯಿತು. ಒಂದು ತಿಂಗಳಾದರೂ ಜ್ವರ ಬಿಡಲಿಲ್ಲ. ಕಾಯಿಲೆಯ ಮಗುವನ್ನು ಬಿಟ್ಟು ತಾಯಿಗೆ ಕೆಲಸಕ್ಕೆ ಹೋಗಲು ಆಗಲಿಲ್ಲ. ನಾನೊಬ್ಬ ಕೂಲಿಮಾಡಿ ತಂದರೆ ಆರು ಮಂದಿಯ ಹೊಟ್ಟೆಗೆ ಅಷ್ಟಕ್ಕಷ್ಟೆ. ಮದ್ದು ಮಾಡಿಸುವರೇ ಹಣ ಇಲ್ಲ; ಮಾಡುವುದೇನು? ನಮಗೆ ಬಂಗಾರ ಎಂಬು ದರ ಗಂಧಗಾಳಿ ಕೂಡಾ ಸೋಕಿರಲಿಲ್ಲ. ಅವಳ ಧಾರೆಶೀರೆ ಒಂದು ಇತ್ತು. ಅದು ನಮ್ಮ ಮದುವೆಯ ಸಮಯದಲ್ಲಿ ನಾನು ಅವಳಿಗೆ ತೆಗೆದುಕೊಟ್ಟದ್ದು. ಅದನ್ನು ಬಹಳ ಜೋಪಾನದಲ್ಲಿ ಇಟ್ಟಿದ್ದಳು. ಅವಳು ಸತ್ತರೆ ಅವಳ ಹೆಣಕ್ಕೆ ಅದನ್ನು ಉಡಿಸಬೇಕೆಂದು ನನ್ನೊಡನೆ ಆಗಾಗ್ಗೆ ಹೇಳುತ್ತಿದ್ದಳು. ಆ ಹೆಣಕ್ಕೆ ಹಾಕಲು ಇಟ್ಟ ಶೀರೆಯನ್ನು ಹಣಕ್ಕಾಗಿ, ಆರು ಕಾಸಿಗೋ ಮೂರು ಕಾಸಿಗೋ ನೂರಿ ಮದ್ದು ಮಾಡಿದೆವು; ಮಗನ ಕಾಯಿಲೆ ಹೇಗೂ ಗುಣವಾಯಿತು. ಹೀಗೆಲ್ಲಾ ನನ್ನ ಪುರಾಣ ರಾತ್ರೀ ಹಗಲೂ ಹೇಳಿದರೂ ಮುಗಿಯಲಿಕ್ಕಿಲ್ಲ. ಸುಮ್ಮನೆ ನಿಮ್ಮ ಸಮಯವೂ ಹಾಳು. ಮಳೆ ಬಿಡುತ್ತಾ ಬಂತು, ನಾನಿನ್ನು ಹೊರಡುತ್ತೇನೆ, ಆಗದೆ?''

"ಅಜ್ಜಾ, ಮೊದಲೇ ನಡಗುವೆ, ಮಳೆ ಪೂರ್ಣ ನಿಲ್ಲದೆ ಹೋಗಬೇಡ. ಸ್ವಲ್ಪ ಕೂತುಕೊ.''

"ಅಯ್ಯೋ ದೇವರೇ, ನಿಮ್ಮಂಥ ದೊಡ್ಡವರು ನಮ್ಮಂಥಾ ಬಡವರನ್ನು ಕಣ್ಣಿನಲ್ಲಿ ಕೂಡಾ ನೋಡಲು ಹೇಸುತ್ತಾರೆ. ಹೆಚ್ಚೇಕೆ? ನನ್ನ ಮಕ್ಕಳಿಗೂ ನಾನು ಹೆಚ್ಚಾಗಿದ್ದೇನೆ.''

"ದೊಡ್ಡವರು ಯಾರಜ್ಜ? ಇಂದಿನ ದೊಡ್ಡವ ನಾಳೆ ಚಿಕ್ಕವನಾ ದಾನು. ಇಂದಿನ ಚಿಕ್ಕವ ನಾಳೆ ದೊಡ್ಡವನಾದಾನು. ಇದೇನು ಶಾಶ್ವ ತವೆ? ದೊಡ್ಡವ ದೇವರೊಬ್ಬನೆ."

"ಅಮ್ಮಾ, ಕೆಲವು ಕಡೆಗಳಲ್ಲಿ ನಾನು ಬೇಡಲಿಕ್ಕೆ ಹೋದರೆ 'ಹೋ

ಗಾಚಿ ಅಪಶಕುನ! ಎಲ್ಲಿಗಾದರೂ ಹೊರಡುವಾಗ ಶನಿಯ ಹಾಗೆ ಎದುರು ಬರುತ್ತೀ!' ಎನ್ನುವರು. ಕೆಲವರು ನಾಯಿಯೊಡನೆ 'ಹಿಡಿ ಹಿಡಿ' ಎಂದು ಹೇಳುತ್ತಾರೆ. ಮೊದಲೇ ಮುದುಕ–ನಡಿಯಲಿಕ್ಕೆ ಕಷ್ಟ. ಅದರ ಮೇಲೆ ನಾಯಿ ಬಂತೆಂದು ಓಡಲಿಕ್ಕಾಗುತ್ತದೆಯೇ? ದೇವರು ಅವರಿಗೆ ಬುದ್ಧಿ ಕೊಟ್ಟ ಹಾಗೆ ಮಾಡಲೆಂದು ಕದಲದೆ ಅಲ್ಲೆ ನಿಲ್ಲುತ್ತೇನೆ. ಆದರೆ ನಾಯಿಗಳಿಗೂ ನನ್ನನ್ನು ಮುಟ್ಟಲು ಹೇಸಿಗೆಯಾಗುತ್ತದೋ ಏನೋ! ಅವು ಬೊಗಳುತ್ತಾ ನಿಲ್ಲುತ್ತವೆ. ಅಲ್ಲದೆ ನನಗೆ ಕಚ್ಚುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ 'ಆಗಾಗ್ಗೆ ಬಂದು ಕೇಳಲು ನಿನ್ನ ಅಪ್ಪನ ಗಂಟುಂಟೇ?' ಎಂದು ಹೇಳುತ್ತಾರೆ. ಬೇರೆ ಕೆಲವರು ಬಾಗಿಲಿಕ್ಕುತ್ತಾರೆ. ಹೀಗೆ ಈ ಹಾಳು ಹೊಟ್ಟೆಗಾಗಿ ಏನೆಲ್ಲ ಅನುಭವಿಸಬೇಕೋ ದೇವರೇ ಬಲ್ಲ."

"ಅಜ್ಜಾ, ಬಾರಿಬಾರಿಗೂ 'ದೇವರು, ದೇವರು' ಅನ್ನುತ್ತೀಯಲ್ಲಾ; ನಮ್ಮ ಊರಲ್ಲಿ ಕೆಲವು ನಾಸ್ತಿಕರು 'ದೇವರು ಈಗ ಇಲ್ಲಿ ಇಲ್ಲ. ನಮ್ಮ ಊರಿನ ರಕ್ಷಣೆ ನೋಡಲು ಅವನಿಂದ ಸಾಧ್ಯವಿಲ್ಲವಂತೆ. ನೀವು ನೀವೇ ನೋಡಿ ಕೊಳ್ಳಿರೆಂದು ಹೇಳಿ ಇಲ್ಲಿಂದ ಅಮೇರಿಕಕ್ಕೆ ಹೋಗಿ ವಾಸಿಸಿದ್ದಾನೆ' ಎಂದು ಹೇಳುತ್ತಾರೆ. ನನಗೂ ಒಮ್ಮೊಮ್ಮೆ ಹಾಗೇ ಅನಿಸುತ್ತದೆ. ಈ ಅನಾಚಾರ ಗಳನ್ನೆಲ್ಲ ನೋಡುವಾಗ."

"ಹಾಗೆ ಹೇಳಬೇಡಿರಮ್ಮಾ, ನಮ್ಮ ನಮ್ಮ ಕರ್ಮಫಲಗಳನ್ನು ನಾವೇ ಅನುಭವಿಸಬೇಕಲ್ಲವೇ? ನೀವು ನನ್ನೊಡನೆ ನನ್ನ ಮಕ್ಕಳ ವಿಚಾರ ಕೇಳಿ ದಿರಿ. ನಾನು ಮಾತಾಡುತ್ತಾ ಮಾತಾಡುತ್ತಾ ಎಲ್ಲಿಂದ ಎಲ್ಲಿಗೆ ಬಂದು ಬಿಟ್ಟೆ? ಈ ಪ್ರಾಯದಲ್ಲಿ ತಲೆಯೇ ಸರಿ ಇಲ್ಲ. ನೋಡಿ, ನಾನು ಮತ್ತು ನನ್ನ ಮಗ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರೂ ಅವನ ಅಡಿಗೆ ಬೇರೆಯೇ ನನ್ನ ಅಡಿಗೆ ಬೇರೆಯೇ. ನಿಮ್ಮಂಥವರ ಬಳಿ ಬೇಡಿ ಸಿಕ್ಕಿದನ್ನು ಆ ಮನೆಯ ಜಗಲಿಯಲ್ಲಿದ್ದ ಒಂದು ಕೋಣೆಯಲ್ಲಿ ಬೇಯಿಸಿ ತಿನ್ನುತ್ತೇನೆ. 'ನಿನ್ನನ್ನು ನಾವು ಎಷ್ಟು ಕಷ್ಟದಿಂದ ಸಾಕಿಸಲಹಿದ್ದೇವೆ; ಈಗ ಈ ಪ್ರಾಯದ ಕಾಲ ದಲ್ಲಿ ಒಂದು ಹಿಡಿ ಅನ್ನ ಕೂಡ ನೀನು ನೀಡುವುದಿಲ್ಲವಲ್ಲ' ಎಂದರೆ 'ಓಹೋ' ನೀನು ಬಹಳ ಮಹತ್ವದ ಕೆಲಸಮಾಡಿದ್ದಿಯಾ? ನೀನೊಬ್ಬನೇ ಮಕ್ಕ ಳನ್ನು ಸಾಕಿದ್ದೊ? ಅಥವಾ ಬೇರೆ ಯಾರಾದರೂ ಸಾಕಿದ್ದಾರೋ? ಮೃಗ ಪಕ್ಷಿಗಳು ಕೂಡಾ ಮಕ್ಕಳನ್ನು ಸಾಕುತ್ತವೆ; ನೀನು ಅದನ್ನು ದೊಡ್ಡ

ಪರ್ವತದ ಹಾಗೆ ಭಾವಿಸುವೆ. ನಿನಗೆ ಕೈಕಾಲು ಸರಿ ಉಂಟಲ್ಲ. ಬೇಡಿ ತಿಂದರೇನು? ನಿನ್ನಂಥವರು ಎಷ್ಟೋ ಜನ ಬೇಡಿ ತಿನ್ನುತ್ತಾರೆ. ನನಗೆ ನನ್ನ ಮಕ್ಕಳನ್ನು ಸಾಕಲಿಕ್ಕಿಲ್ಲವೇ? ಎಂದು ಗದರಿಸುತ್ತಾನೆ; ಇದೆಲ್ಲಾ ನನ್ನ ಕರ್ಮಾಧೀನ.''

"ಹಾಗೋ! ಮಗ ಜೀವದಿಂದಿದ್ದು ತಂದೆಯನ್ನು ಬೇಡಿತಿನ್ನು ಎಂದು ಹೇಳುವವ ಮನುಷ್ಯನೇ? ಸರ್ವಥಾ ಅಲ್ಲ. ಅವನು ಮಾನವ ರೂಪದ ಪಶು. ಲೋಕದಲ್ಲಿ ಎಷ್ಟೋ ಮಂದಿ ಮಾನವ ರೂಪದಲ್ಲಿ ಹುಟ್ಟಿದರೂ ವಾನರರಂತೆ, ದಾನವರಂತೆ, ಪಶುಪಿಶಾಚಿಗಳಂತೆ ಬಾಳುತ್ತಾರೆ.'

"ಅಮ್ಮಾ, ಅದು ಹಾಗಿರಲಿ; ಮೇಲೆ ಉಗುಳಿದರೆ ತನ್ನ ಮುಖಕ್ಕೇ ಬೀಳುವುದು ಎನ್ನುತ್ತಾರಲ್ಲ—ಹಾಗೆ ನನ್ನ ಮಕ್ಕಳ ನಡತೆ ಹೇಳಿದರೆ ನನಗೇ ನಾಚಿಕೆಯಾಗುತ್ತದೆ. ಆದರೂ ನಿಮ್ಮೊಡನೆ ಹೇಳಿ ಮನಸ್ಸನ್ನು ಹಗುರಮಾಡಿಕೊಳ್ಳಬೇಕೆಂದೆನಿಸುತ್ತದೆ. ನಾನು ಹೆಚ್ಚಿಗೆ ವಾದಕ್ಕೆ ನನ್ನ ಮಗನೊಡನೆ ನಿಲ್ಲುವುದಿಲ್ಲ; ಏಕೆಂದರೆ 'ನಿನ್ನನ್ನು ಮನೆಯಲ್ಲಿ ಇಟ್ಟುಕೊಂಡದ್ದರಿಂದಲೇ ನನಗೆ ಈ ರಗಳೆ. ದೂರವಿರಿಸುತ್ತಿದ್ದರೆ ಈ ಉಪದ್ರ ಇರುತ್ತಿರಲಿಲ್ಲ' ಎಂದು ರೇಗುತ್ತಾನೆ. ಆದ್ದರಿಂದ ಎಲ್ಲಿಯಾದರೂ ಬೇಡಿತಂದುದನ್ನು ಬೇಯಿಸಿ ತಿನ್ನಲು ಒಂದು ತಾಣವಾದರೂ ಇರಲೆಂದು ನಾನು ಮಾತಾಡುವುದೇ ಇಲ್ಲ. ಸತ್ತ ಮೇಲೆ ನನ್ನ ಹೆಣವನ್ನು ಮಗನೇ ಒಂದು ಮುಷ್ಟಿ ಮಣ್ಣುಮಾಡಿಯಾನೆಂದು ಆಶೆ ನನಗೆ."

"ಅಜ್ಜಾ, ಸತ್ತಮೇಲೆ ಹೆಣವನ್ನು ಯಾರು ಹೂಳಿದರೇನು? ಮಕ್ಕಳೇ ಆಗಬೇಕೆಂದಿದೆಯೋ? ಜೀವದಿಂದಿರುವಾಗ ಸುಡಲಿಕ್ಕೆ ಆ ಮಕ್ಕಳಿಲ್ಲ, ಇತರರೇ! ಹೆಣ ಹೂಳಲಿಕ್ಕೆ ಮಾತ್ರ ಆ ಮಕ್ಕಳು ಬೇಕೆಂದರೇನು? ಸಾಕು, ನಿನ್ನ ಮಕ್ಕಳ ಮಾತನ್ನು ಇನ್ನುಮುಂದೆ ಎತ್ತಬೇಡ. ಅದನ್ನು ಕೇಳಿದರೇ ಅಮಂಗಳ. ಈ ಲೋಕದಲ್ಲಿ ಮಾನವತ್ವ ಎಂಬುದು ಬದುಕಿ ಉಳಿದುದಾದರೆ ನಿನಗೆ ನಿನ್ನಮಕ್ಕಳ ಸ್ಥಾನಕ್ಕೆ ಬೇರೆ ಯಾರಾದರೂ ದೊರಕುವರು. ನೀನು ಹೆದರಬೇಡ. ಬಾ, ಹಸಿವೆಯಾಗುವುದಾದರೆ ಉಣ್ಣು. ನಿನ್ನಂಥ ಮುದುಕನಿಗೆ ಅನ್ನಹಾಕಿ ಉಪಚರಿಸಿದರೆ ಯಾರೂ ಏನೂ ಅನ್ನಲಿಕ್ಕಿಲ್ಲ. ಇತರರಿಗಾದರೆ ಅದಕ್ಕೆ ಅಪಾರ್ಥ ಕಲ್ಪಿಸುವ ಅಜ್ಞಾನಿಗಳು ಎಷ್ಟೋ ಮಂದಿ ಇದ್ದಾರೆ. ನೀನು ಹಸಿವಾದಾಗ ಇಲ್ಲಿ ಬಂದು ಉಂಡುಹೋಗು. ಅಷ್ಟೆ

ಅಲ್ಲ; ನಿನಗೆ ತಲೆಗೆ ಎಣ್ಣೆ, ವೀಳ್ಯದೆಲೆ ಎಲ್ಲ ಕೊಡುತ್ತೇನೆ ಬಾ. ನಡೆಯು ಲಿಕ್ಕೆ ಆಗದಿದ್ದರೆ ಇಲ್ಲೇ ಇರು, ತಿರುಗಬೇಡ."

"ಅವ್ಮಾ, ನಾನು ಬಡವ; ನೀವು ದೊಡ್ಡವರು. ಮಾತ್ರವಲ್ಲ, ಮನಸ್ಸಿನಲ್ಲೂ ಬಹಳ ದೊಡ್ಡವರು. ಐಶ್ವರ್ಯವಂತರಲ್ಲಿ ನಿಮ್ಮಂಥ ಉದಾರಿಗಳು ಬಹಳ ಮಂದಿ ಇಲ್ಲ. ನೀವು ನನ್ನ ಪಾಲಿನ ಮಹಾದೇವಿ."

"ಹಾಗೆ ಹೇಳಬೇಡ ಅಜ್ಜಾ. ನನ್ನ ಮನಸ್ಸಿನ ತೃಪ್ತಿಗಾಗಿ ನಾನು ನಿನಗೆ ಅನ್ನ ನೀಡುತ್ತೇನೆ. ನಿನ್ನ ಉಪಕಾರಕ್ಕೆಂದೇ ಅಲ್ಲ; ನನಗೂ ಅದ ರಲ್ಲಿ ಮನಶ್ಶಾಂತಿ ದೊರಕುತ್ತದೆ. ನಮ್ಮ ಮನೆಗೆ ಎಷ್ಟೋ ಮಂದಿ ಅತಿಥಿ ಗಳು ಬರುತ್ತಾರೆ. ಅವರಿಗೆ ಮರ್ಯಾದೆಗೆಂದು ನಾವು ಎಷ್ಟೋ ಹಣ ಖರ್ಚುಮಾಡಿ ತಿಂಡಿತಿನಸುಗಳನ್ನು ಮಾಡಿ ಹಸಿವಿಲ್ಲದಿದ್ದರೂ ಬಡಿಸು ತ್ತೇವೆ. ಹಸಿವಿಲ್ಲದವರಿಗೆ ಬಡಿಸಿ ಅಜೀರ್ಣ ಬರಿಸುವುದರಿಂದ ಹಸಿವಿದ್ದವ ರಿಗೆ ಉಣಿಸಿ ತೃಪ್ತಿಪಡಿಸುವುದು ಒಳ್ಳೆಯದಲ್ಲವೇ ಇದ್ದವರಿಗೆ ಇಕ್ಕುವುದ ಕ್ಕಿಂತ, ಇಲ್ಲದವರಿಗೆ ನೀಡುವುದು ಲೇಸಲ್ಲವೇ?

"ಹೌದಮ್ಮಾ, ಹೀಗೆ ಎಷ್ಟು ಮಂದಿ ಭಾವಿಸುತ್ತಾರೆ? ಉಂಡ ಎಂಜ ಲೆಲೆ ಹೆಕ್ಕಿ ತಿನ್ನಲೆಂದು ಭಾವಿಸುತ್ತಾರೆ."

"ನಿನ್ನ ಮಾತನ್ನು ಕೇಳುವಾಗ ನನಗೆ ವೀರ ಯೋಗಿ ವಿವೇಕಾನಂದರ ಜೀವನದ ಒಂದು ಘಟನೆ ನೆನಪಾಗುತ್ತದೆ ಅಜ್ಜಾ, ವಿವೇಕಾನಂದರು ಬಂಗಾಳದವರು. ಅವರು ಸನ್ಯಾಸಿ. ಆಗ ಬಂಗಾಳದಲ್ಲಿ ಬರಗಾಲ ಬಂದಿತ್ತು. ಎಷ್ಟೋ ಮಂದಿ ಆಹಾರವಿಲ್ಲದೆ ಸತ್ತರು. ಆ ಸಮಯದಲ್ಲಿ ಒಂದು ಪಶು ರಕ್ಷಣಾ ಸಂಘದವರು ಬಂದು ವಿವೇಕಾನಂದರೊಡನೆ ಸಹಾಯ ಯಾಚಿಸಿ ದರು. 'ಮನುಷ್ಯರೇ ಆಹಾರವಿಲ್ಲದೆ ಸಾಯುತ್ತಿರುವ ಈ ಕಾಲದಲ್ಲಿ ನೀವು ಅದರ ಗೊಡವೆ ಬಿಟ್ಟು, ಪಶುರಕ್ಷಣೆಗೆ ತೊಡಗಿದ್ದೀರಿ. ಮೊದಲು ಬರಗಾಲ ದಲ್ಲಿ ಸಾಯುವವರಿಗೆ ಸಹಾಯ ನೀಡಿ, ▪ ಮೇಲೆ ಪಶುರಕ್ಷಣೆಯ ಕೆಲಸ' ಎಂದರು. ಅದಕ್ಕೆ ಅವರು 'ಸ್ವಾಮೀ, ನಾವು ಆ ವಿಚಾರದಲ್ಲಿಲ್ಲ. ನಮ್ಮ ಕೆಲಸ ಪಶುರಕ್ಷಣೆ. ಗೋಮಾತೆಯ ಕೆಲಸವೇ ಮಹಾಕೆಲಸ ಎಂದು ನಮ್ಮ ಭಾವನೆ' ಎಂದರು. ಅದಕ್ಕೆ ವಿವೇಕಾನಂದರು ಏನು ಹೇಳಿದರು ಗೊತ್ತೇ! ಹೌದು, ನಿಮ್ಮಂಥ ಮನುಷ್ಯರಿಗೆ ಗೋಮಾತೆಯೇ ಜನ್ಮದಾತೆ ಯಾಗಿರಬೇಕು' ಎಂದರು. ಹಾಗೇ ನೀನು ಹೇಳುತ್ತೀ. ಅವರ ಮನೆಯ

ದನ, ನಾಯಿಗಳಿಗೆ ಕೊಡುವುದನ್ನು ನಿನಗೆ ಕೊಡುವುದಿಲ್ಲ—ಎಂದು. ಕೆಲವರು ಸೋಮಾರಿಗಳಾಗಿ ಇಲ್ಲದ ವೇಷಗಳನ್ನೆಲ್ಲ ಧರಿಸಿ ಬೇಡಲಿಕ್ಕೆ ಬರುತ್ತಾರೆ. ಅಂಥವರಿಗಾದರೂ ಹಾಗೆ ಮಾಡಿದರೆ ಉತ್ತಮ. ಅಲ್ಲದೆ ನಿನ್ನಂಥ ಶಕ್ತಿಹೀನ ಮುದುಕನಿಗ ಇದ್ದುದನ್ನು ನೀಡಲೇ ಬೇಕು. ಲೋಕದಲ್ಲಿ ಮಾನವರ ನಡತೆಗಳ ನೆಲೆಯನ್ನು ತಿಳಿಯುವುದು ಕಷ್ಟ. ಎಷ್ಟು ಮೇಲುಂಟೋ, ಎಷ್ಟು ಕೀಳುಂಟೋ, ದೇವರೇ ಬಲ್ಲ. ನೀನು ಮಾತ್ರ ಇನ್ನುಮುಂದೆ ಬೇಕಾದುದನ್ನು ಇಲ್ಲಿ ಕೇಳಿಕೋ; ದೇವರು ನಿನಗೆ ನೀಡುವಷ್ಟು ಕೊಟ್ಟಿದ್ದರಿಂದ ಹೇಳಿದೆ; ಇಲ್ಲವಾದರೆ ನಾನೆಲ್ಲಿಂದ ಕೊಡುವುದು? ಮುಖ ತೊಳೆದುಕೊಂಡು ಬಾ; ಊಟಮಾಡು.”

“ಅಮ್ಮಾ, ನಿಮ್ಮ ಆತ್ಮೀಯತೆಯ ಮಾತಿನಿಂದಲೇ ನನ್ನ ಹೃದಯ ತುಂಬಿತು. ಇನ್ನು ಹೊಟ್ಟೆಯನ್ನೂ ತುಂಬಿಸುತ್ತೇನೆ” ಎಂದು ಕೈಕಾಲು ತೊಳೆದು ಊಟಮಾಡಿದನು.

ಸತೀಶನಿಗೆ ಈಗ ಮುದುಕನು ಗುಮ್ಮನೆಂಬ ಹೆದರಿಕೆ ಮಾಯವಾಗಿದೆ. ತುಕ್ರಜ್ಜ ಬಂದ ಕೂಡಲೇ ಬಹಳ ಸಂತೋಷವಾಗುತಿತ್ತು. ಅವನಿಗೆ ಏನಾದರೂ ತಿನ್ನಲಿಕ್ಕೆ ಕೊಟ್ಟರೆ ಅದನ್ನು ತುಕ್ರಜ್ಜನ ಹಲ್ಲಿಲ್ಲದ ಬಾಯಿ ತೆರೆಯಿಸಿ ಅವನೇ ಬಾಯಿಗೆ ತುರುಕುತ್ತಾನೆ. ಆತನ ಹಣ್ಣಾದ ಮೀಸೆಯನ್ನು ಎಳೆಯುತ್ತಾನೆ. ತೋಟದ ಹೂಗಳನ್ನು ಕಿತ್ತು ಅವನ ಕಿವಿಗಳಿಗೂ ಜೋಳು ತಲೆಗೂ ಹಗ್ಗದಿಂದ ಬಿಗಿಯುತ್ತಾನೆ. ಹೀಗೆ ಅಜ್ಜನೆಂದರೆ ಸತೀಶನಿಗೆ ಒಂದು ಆಟದ ವಸ್ತುವಾಗಿದ್ದಾನೆ. ತುಕ್ರನಿಗೂ ಮಗು ಏನು ಮಾಡಿದರೂ ಸಂತೋಷವೇ.

ಈಗ ಸತೀಶ ಶಾಲೆಗೆ ಹೋಗುತಿದ್ದಾನೆ; ನಾಲ್ಕನೆಯ ದರ್ಜೆಯಲ್ಲಿದ್ದಾನೆ. ಒಂದು ದಿನ ಸಂಜೆ ಶಾಲೆಯಿಂದ ಬಂದ ತುಕ್ರಜ್ಜ ಮನೆಯಲ್ಲೇ ಇದ್ದ. ಇಂದುವೂ ಅಲ್ಲೇ ಇದ್ದಳು. ಜಾನಕಮ್ಮನವರು ಇಂದುವಿನ ಹತ್ತಿರ ಕೂತಿದ್ದರು. ಎಂದಿನಂತೆ ಸತೀಶ ತುಕ್ರನ ಹತ್ತಿರ ಬಂದು ಆತನ ಮೀಸೆಗೆ ಕೈಹಾಕಿದ. “ಅಜ್ಜ, ನಿನಗೆ ಮಾತ್ರ ಮೀಸೆ ಏನು? ನನಗೆ ಯಾಕೆ ಮೀಸೆ ಇಲ್ಲ?” ಎಂದು ಕೇಳಿದನು. “ನೀವು ಸಣ್ಣವರು. ದೊಡ್ಡವರಾದ ಮೇಲೆ ನಿಮಗೂ ಮೀಸೆ ಬರುತ್ತದೆ” ಎಂದು ತುಕ್ರನಗುತ್ತಾ ಹೇಳಿದನು. “ನನಗೆ ಈಗಲೇ ಮೀಸೆ ಬೇಕಿತ್ತಲ್ಲ ತುಕ್ರಜ್ಜ.” “ಬೇಡ. ದೇವರೆ,

ನಿಮಗೆ ಮೀಸೆ ಬರುವುದು ಬೇಡ. ಮೀಸೆ ಬಂದಕೂಡಲೇ ಕಷ್ಟಕಟ್ಟು ಸಾಕಿ ಸಲಹಿದ ತಂದೆ, ತಾಯಿಗಳ ನೆನಪೇ ಹೋಗುತ್ತದೆ." ಇಷ್ಟು ಹೇಳು ವಾಗ ತುಕ್ರನ ಕಣ್ಣುಗಳಲ್ಲಿ ನೀರು ತುಂಬಿಬಂತು. "ಇಲ್ಲಜ್ಜ, ನಮ್ಮ ಶಾಲೆಯುಲ್ಲಿ ನಾಡದು ನಾಟಕವಿದೆ. ನನಗೂ ಅದರಲ್ಲಿ ಪಾತ್ರವಿದೆ. ಅದಕ್ಕೆ ನನಗೆ ಮೀಸೆ ಆಗಬೇಕಿತ್ತು." "ನಿಮಗೆ ಯಾರ ಪಾತ್ರ?" ತುಕ್ರ ಪ್ರಶ್ನಿಸಿದ. "ನನಗೆ ಶ್ರೀರಾಮನ ಪಾತ್ರ" ಸತೀಶ ಉತ್ತರಕೊಟ್ಟ. "ಶಹಭಾಸ್!" ಎನ್ನುತ್ತಾ ತುಕ್ರ ಸತೀಶನನ್ನು ತನ್ನ ಹತ್ತಿರ ಎಳೆದುಕೊಂಡ. "ದೇವರೆ, ನೀವು ನಾಟಕದಲ್ಲಿ ಮಾತ್ರ ರಾಮದೇವರಾಗಬಾರದು. ನಿತ್ಯ ರಾಮದೇವ ರಾಗಿರಬೇಕು. ನಿಮ್ಮ ತಾಯಿಯ ತೃಪ್ತಿಗಾಗಿ ನೀವು ಯಾವ ತ್ಯಾಗ ಮಾಡಲೂ ಸಿದ್ಧರಿರಬೇಕು. ಅದರಷ್ಟು ದೊಡ್ಡ ಪುಣ್ಯದ ಕೆಲಸ ಯಾವುದೂ ಇಲ್ಲ. ನೀವು ಯಾವ ಕೆಲಸಮಾಡುವಾಗಲೂ ನಿಮ್ಮ ತಾಯಿಯ ಹರ್ಷ ಗೊಂಡ ಹೃದಯ ನಿಮ್ಮನ್ನು ಆಶೀರ್ವದಿಸಬೇಕು. ಇಲ್ಲವಾದರೆ ಆ ಕೆಲಸ ದಲ್ಲಿ ಜಯದೊರಕಲಾರದು. ತಿಳಿಯಿತೇ?" ಎಂದು ಹೇಳುತ್ತಾ ಒಂದು ಮುತ್ತುಕೊಟ್ಟ. ಇದನ್ನು ಕೇಳಿ ಇಂದುವಿನ ಕಣ್ಣುಗಳಲ್ಲೂ ನೀರು ತುಂಬಿ ಬಂತು. "ಅಜ್ಜ, ನಾನು ನಿತ್ಯ ರಾಮನಾಗಿಯೇ ಇರುತ್ತೇನೆ. ನನ್ನ ಅಮ್ಮನನ್ನು ಎಂದೆಂದಿಗೂ ಮರೆಯಲಾರೆ. ಇಂದು ಖಂಡಿತ ಬೇಕಾದರೆ ಪಂಥಹಾಕುತ್ತೇನೆ. ಕೊಡು ಕೈ" ಎನ್ನುತ್ತಾ ತುಕ್ರನ ಕೈ ಎಳೆದು ಸತೀಶ ತನ್ನ ಕೈಯಿಂದ ಹೊಡೆದೇ ಬಿಟ್ಟ. ಎಲ್ಲರೂ ನಕ್ಕರು. "ಅಜ್ಜ, ನನಗೆ ನಿನ್ನ ಮೀಸೆ ಕೊಡುವೆಯೇನು? ನಾಟಕ ಮುಗಿದ ಕೂಡಲೇ ಕೊಡುತ್ತೇನೆ" ಸತೀಶ ಪುನಃ ಮಾತಿಗಾರಂಭಿಸಿದ. "ಆಯಿತು ದೇವರೆ. ಆದರೆ ನನ್ನ ಮೀಸೆ ತೆಗೆದುಕೊಂಡು ಅಮ್ಮನನ್ನು ಮರೆಯಬಾರದು." ಇಷ್ಟರ ವರೆಗೆ ಮೌನವಾಗಿ ಇವರ ಮಾತನ್ನೇ ಕೇಳುತಿದ್ದ ಇಂದು ಸತೀಶನನ್ನು ಹತ್ತಿರ ಎಳೆದುಕೊಂಡು "ನಿನಗೆ ಏಕೋ ಮೀಸೆ? ಶ್ರೀರಾಮನಿಗೆ ಮೀಸೆ ಬೇಕೇನು?" ಎಂದು ಕೇಳಿದಳು. "ಹೋದ ವರುಷ ನೀನು ನೋಡಲಿಲ್ಲವೆ ಅಮ್ಮ? ಹೆಚ್ಚಾಗಿ ನಾಟಕದಲ್ಲಿ ಪಾರ್ಟುಹಾಕಿದವರೆಲ್ಲರಿಗೂ ಮೀಸೆ ಇತ್ತು. ನನಗೆ ಬೇಡವೆ?" ಎಂದು ಸತೀಶ ಕೇಳಿದ. "ಮೀಸೆ ಇರುವ ಪಾತ್ರ ಬೇರೆ. ಶ್ರೀರಾಮನ ಪಾರ್ಟು ಹಾಕುವವರಿಗೆ ಮೀಸೆ ಬೇಡ" ಎಂದಳು ಇಂದು.

ಕಾಲಚಕ್ರ ಉರುಳುತಿತ್ತು. ತುಕ್ರ ಪ್ರತಿ ಸಲ ಬಂದು ಹೋಗುವಾಗ

ಸತೀಶನಿಗೆ ಮುತ್ತು ಕೊಟ್ಟು "ಅಮ್ಮನನ್ನು ಎಂದೂ ಮರೆಯಬೇಡಿ ದೇವರೆ. ಅವಮಂಗಳವೆಂದು ಯಾವ ಕಾರ್ಯದಲ್ಲೂ ಹಿಂದೆ ದೂಡಬೇಡಿ. ಅವರ ನಿರ್ಮಲ ಹೃದಯದ ಪವಿತ್ರವಾದ ಧುರಿಯಲ್ಲಿ ಮುಂದೇ ಕೆಲಸಕ್ಕೆ ತೊಡಗಿರಿ" ಎಂದು ಹೇಳುತಿದ್ದ. ಸತೀಶನಿಗೆ ತನ್ನ ತಾಯಿಯ ಮೇಲಿನ ಭಕ್ತಿ ದಿನದಿಂದ ದಿನಕ್ಕೆ ಹೆಚ್ಚಾಗುತಿತ್ತು.

ಇಂದುವಿಗಂತೂ ತುಕ್ರನೆಂದರೆ ತನ್ನ ದುಃಖಮಯವಾದ ಬಾಳಿನಲ್ಲಿ ಶಾಂತಿಯನ್ನು ತುಂಬಲು ಪರಮಾತ್ಮನು ಕಳುಹಿದ ಮಹಾ ಬಂಧುವಿನಂತಿದ್ದನು.

o o o o o

ಸತೀಶನೀಗ ಕಲಿತು ಪದವೀಧರನಾಗಿ ಕೆಲಸಕ್ಕೆ ಸೇರಿದ್ದಾನೆ. ತುಕ್ರಜ್ಜ ತೀರಿಹೋಗಿದ್ದನು. ಆದರೆ,ಆತನ ನೆನಪು ಇಂದುವಿಗಾಗಲಿ ಸತೀಶನಿಗಾಗಲೀ ಅಳಿದುಹೋಗಿರಲಿಲ್ಲ.

ಒಂದು ದಿನ ಸತೀಶನು ಹೋದವ ಸಂಜೆಯಾಗುವಾಗ ಮನೆಗೆ ಬಂದ. ಇಂದು ಹೂದೋಟದೊಳಗಿನ ಬಳ್ಳಿಮಾಡದಲ್ಲಿ ಕೂತು ಏನನ್ನೊ ಆಲೋಚಿಸುತಿದ್ದಳು. ಮಗ ಬಂದುದರ ಅರಿವಾಗಲೇ ಇಲ್ಲ. ಸತೀಶ ತಾಯಿ ಮನೆಯಲ್ಲಿಲ್ಲದುದನ್ನು ಕಂಡು ಬಳ್ಳಿಮಾಡಕ್ಕೆ ತೆರಳಿದ. ಅಲ್ಲಿ ತಾಯಿಯೊಡನೆ, "ಏನಮ್ಮಾ ಗಾಢ ಯೋಚನಾಗ್ರಸ್ಥಳಾಗಿರುವೆ?" ಎಂದು ಕೇಳಿದ. "ಏನಿಲ್ಲ, ಈ ಗೃಹವು ಗೃಹಿಣಿ ಇಲ್ಲದೆ ಶೋಭಿಸುವುದಿಲ್ಲ. ನಿನಗೊಂದು ಮದುವೆಮಾಡಬೇಕೆಂಬ ಆಲೋಚನೆ ನನಗಾಗಿದೆ. ನಿನಗೆ ಬೇಕಾದ ಹುಡುಗಿಯನ್ನು ಆರಿಸು. ಆ ಮೇಲೆ ಈ ಸಂಸಾರದ ಹೊಣೆಗಾರಿಕೆಯನ್ನು ಅವಳ ಮೇಲೆ ಹೊರಿಸಿ ನಿಶ್ಚಿಂತೆಯಿಂದ ದೇವರ ಧ್ಯಾನಮಾಡುತ್ತಾ ಮುಂದಿನ ದಾರಿಯನ್ನು ಸುಗಮಗೊಳಿಸಬೇಕೆಂದಿದ್ದೇನೆ."

"ಏಕಮ್ಮ ಇಷ್ಟು ಆವಸರ? ನಿನ್ನ ಮುಂದಿನ ದಾರಿ ಸುಗಮವಾಗ ಬೇಕಾದರೆ ಈಗ ಯಾವ ಅಡ್ಡಿ ಆತಂಕಗಳಿವೆ?"

"ಈ ಸಂಸಾರದ ಹೊಣೆಗಾರಿಕೆಯೇ ಅಡ್ಡಿ ಆತಂಕ. ಇದರಲ್ಲೇ ಬಿದ್ದು ಹೊರಳಾಡುತಿದ್ದರೆ ಸಾಯುವಾಗಲೂ ಇಹಜನ್ಮದ ಯೋಚನೆ ಬಂದೀತು. ಸಾಯುವಾಗ ದೇವರ ಸ್ಮರಣೆ ಬರಬೇಕಾದರೆ ಬಾಳಿನಲ್ಲಿ ಶಾಂತಿ ಅವಶ್ಯ. ಸಾವು ಬರುವುದಕ್ಕೇನು ಮಾಯಿದೆ ಇದೆಯೆ? ಇಂದೊ—ನಾಳೆಯೊ!

ಮಗೂ, ಇಂದಿನ ಸಂಸ್ಕಾರದ ಬುತ್ತಿಯೇ ಮುಂದಿನ ಜನ್ಮದ ದಾರಿಗಂಟೆಂದು ನೀನು ಗೀತೆಯಲ್ಲಿ ಓದಿಲ್ಲವೆ? ನೀನು ಬಲ್ಲವ. ನೀನೇ ನನಗೆ ಇದಕ್ಕೆಲ್ಲ ಪ್ರೋತ್ಸಾಹ ಕೊಡಬೇಕು. ಹಿಂದಿನ ಪುರಾಣಪುರುಷರೆಲ್ಲಾ ಬಾಳಿನ ಕೊನೆಯ ದಿನಗಳನ್ನು ವಾನಪ್ರಸ್ತಾಶ್ರಮದಲ್ಲಿ ಕಳೆಯುತಿದ್ದುದು ಇದಕ್ಕಾಗಿಯೆ. ಆದುದರಿಂದ ನೀನು ಆದಷ್ಟು ಬೇಗನೆ ಮದುವೆಯಾಗಬೇಕು.”

ಸತೀಶ ತಾಯಿಯ ಮಾತಿಗೆ ಒಪ್ಪಿಗೆ ಕೊಟ್ಟ. ಒಂದು ಕಡೆಯ ಹೆಣ್ಣು ಗೊತ್ತುಮಾಡಿದ. ಒಂದು ವಿಷಯವನ್ನು ಹೆಣ್ಣಿನ ಕಡೆಯವರಿಗೆ, ಮತ್ತೆ ಮದುವೆಯ ದಿನದಂದು ಗಲಾಟೆಮಾಡಿಕೊಳ್ಳುವುದು ಬೇಡವೆಂದು, ಮೊದಲೇ ತಿಳಿಸಿದ. “ತನ್ನ ತಾಯಿ ವಿಧವೆಯಾದರೂ ಮುತ್ತೈದೆಯರಂತೆ ನನ್ನ ಲಗ್ನಮಂಟಪದಲ್ಲಿದ್ದು ಪ್ರತಿಯೊಂದು ಕೆಲಸವನ್ನೂ ಮಾಡುತ್ತಿರಬೇಕು. ನಮ್ಮನ್ನು ಹರಸುತ್ತಿರಬೇಕು.’’ ಇದನ್ನು ಕೇಳಿ ಹೆಣ್ಣಿನ ಕಡೆಯವರು—‘‘ಇದು ಸಾಧ್ಯವಿಲ್ಲ; ಇದು ಅಮಂಗಳ’’ ಎಂದು ವಿರೋಧ ವ್ಯಕ್ತಪಡಿಸಿದರು. ಇದನ್ನು ವಿರೋಧಿಸುವ ಕಾರ್ಯದಲ್ಲಿ ಹೆಂಗಸರದೇ ಕೈ ಮುಂದಾಗಿತ್ತು. ಆದರೆ, ಸತೀಶ ತನ್ನ ವಾದವನ್ನು ಹಿಂತೆಗೆಯಲಿಲ್ಲ. “ಮದುವೆ ಎಂದರೆ ಜೀವನದಲ್ಲೇ ಒಂದು ಮಹತ್ವದ ವಿಷಯ. ಅಂದು ನನ್ನನ್ನು ಹೆತ್ತ ತಾಯಿ ತುಂಬು ಹೃದಯದಿಂದ ಆಶೀರ್ವದಿಸದಿದ್ದರೆ ಇಂದು ನಾನು ಏಳ್ಗೆಯನ್ನು ಹೊಂದುತ್ತಿರಲಿಲ್ಲ. ಅವಳನ್ನು ವಿಧವೆಯೆಂದು ದೂರ ವಿರಿಸಿ ನನ್ನ ಲಗ್ನದಂದು ಅವಳ ನಿರ್ಮಲವಾದ ಮನಸರೋವರವನ್ನು ಕದಡಿಸಲಾರೆ”—ಎಂದು ಸತೀಶ ಹೇಳಿದ. “ಅದು ಸಾಧ್ಯವಿಲ್ಲ. ಇಷ್ಟರ ವರೆಗೆ ನಡೆದುಕೊಂಡು ಬಂದ ರೀತಿ ಅದು. ಹಿಂದಿನವರೆಲ್ಲಾ ಇದೇ ರೀತಿ ಮದುವೆಯಾಗಿದ್ದಾರೆ’’ ಎಂದು ಅವರು ಪ್ರತಿಯಾಗಿ ವಾದಿಸಿದರು. “ಇಷ್ಟರ ವರೆಗೆ ಹಾಗೆ ಆದವರೆಲ್ಲಾ ನಿರ್ಭಾಗ್ಯರು. ಅವರಿಗೆ ಅವರ ಮದುವೆಯಂದು ಮಾತೆಯ ಮಂಗಳ ಮೂರ್ತಿಯ ಆಶೀರ್ವಾದ ಪಡೆಯುವ ಪುಣ್ಯವಿರಲಿಲ್ಲ. ಮಕ್ಕಳಿಗೆ ಮಾತೆಯು ಸದಾ ಮಂಗಳೆಯಾಗಿರುವಳು”—ಎಂದು ಸತೀಶ ಹೇಳಿದ. ಸತೀಶ ಹಿಡಿದ ಹಟ ಬಿಡಲಿಲ್ಲ. ಕಡೆಗೆ ಆತನ ಮಾತಿಗೆ ಒಪ್ಪಿಗೆ ಸಿಕ್ಕಿತು.

ಸತೀಶನ ಮನೆಯಲ್ಲಿ ಇಂದು ಮದುವೆ. ಬಹಳ ಗದ್ದಲ. ನೆಂಟರ

ಷ್ಟರೆಲ್ಲಾ ಕೂಡಿದ್ದಾರೆ. ಲಗ್ನದ ಮುಹೂರ್ತ ಸಮೀಪಿಸಿತು. ಮುತ್ತೈದೆಯರೆಲ್ಲಾ ಮಂಟಪದ ಬಳಿ ನೆರೆದಿದ್ದಾರೆ. ಇಂದುವು ದೂರದಲ್ಲೇ ನಿಂತಿದ್ದಳು. ಸತೀಶನು ತಾಯಿ ದೂರ ನಿಂತ ಕಾರಣವನ್ನು ಅರಿತ. ಬಳಿಗೆ ಹೋಗಿ ಕಾಲಿಗೆ ಅಡ್ಡ ಬಿದ್ದು ಮಂಟಪಕ್ಕೆ ಬರಬೇಕೆಂದು ಬೇಡಿಕೊಂಡ. ಆದರೆ, ಇಂದು, "ಬರುವುದಿಲ್ಲ" ಎಂದಳು. "ಮಗೂ, ಶುಭಕಾರ್ಯದಲ್ಲಿ ವಿಧವೆಯಾದ ನಾನು ಪ್ರವೇಶಿಸಿ ಅಪಮಂಗಳ ಮಾಡಬಾರದು. ನಾನು ಇಲ್ಲೇ ಇರುವೆನು." ಇದನ್ನು ಹೇಳುತ್ತಿದ್ದಂತೆಯೇ ಇಂದುವಿನ ಕಣ್ಣಿನಲ್ಲಿ ನೀರು ಇಳಿಯುತ್ತಿತ್ತು.

"ಅಮ್ಮಾ, ಬಲ್ಲವಳಾದ ನಿನಗೂ ಅಜ್ಞಾನವೆ? ನೀನು 'ವಿಧವೆ' 'ಅಪಮಂಗಳೆ' ಎಂದು ಹೇಳುತ್ತೀಯಾ? ಗಂಡ ಸತ್ತರೆ ಹೆಂಗಸರ ಆಭರಣ ಕಳಚಿ ಅವರನ್ನು ವಿಧವೆಯರೆಂಬ ಪ್ರತ್ಯೇಕ ವರ್ಗಕ್ಕೆ ಸೇರಿಸುತ್ತಾರೆ; ಅವರನ್ನು 'ಅಪಮಂಗಳ' 'ಅಪಶಕುನ' ಎನ್ನುತ್ತಾರೆ. ಅದೇ ಪುರುಷನ ಹೆಂಡತಿ ಸತ್ತರೆ ಅವನು ವಿಧುರತನದ ಗುರುತಿಗಾಗಿ ಏನನ್ನು ಕಳಚುತ್ತಾನೆ? ಅವನೇಕೆ 'ಅಪಮಂಗಳ' 'ಅಪಶಕುನ'ವಾಗುವುದಿಲ್ಲ? ಇದೆಲ್ಲಾ ಸ್ವಾರ್ಥಕ್ಕಾಗಿ ನಿರ್ಮಿಸಿದ ಧರ್ಮಶಾಸ್ತ್ರ. 'ಹಳೆಯದೆಲ್ಲಾ ಹೊನ್ನು, ಹೊಸತೆಲ್ಲ ಮಣ್ಣು' ಎಂದು ನಾವು ಎಣಿಸಬಾರದು. 'ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ' ಸತ್ಯಕ್ಕೆ ಅಪಚಾರ ಮಾಡದಿರುವುದೇ ಧರ್ಮಶಾಸ್ತ್ರ. ನಾವು ಇಂತಹ ಅಂಧಶ್ರದ್ಧೆಗಳನ್ನೆಲ್ಲಾ ಬಿಡಬೇಕು. ನಿನ್ನಂತಹ ಸಾಧ್ವಿ, ಪತಿವ್ರತೆ ಅಪಮಂಗಳೆಯಾದರೆ, ಒಬ್ಬಳು ಸತ್ತರೆ ಇನ್ನೊಬ್ಬಳನ್ನು—ಅವಳು ಸತ್ತರೆ ಮತ್ತೊಬ್ಬಳನ್ನು—ಹೂವಿನಿಂದ ಹೂವಿಗೆ ಹಾರುವ ಪತಂಗಗಳಂತೆ ಕಾಮಲಾಲಸೆಯಿಂದ ಮದುವೆಯಾಗುವ ಪುರುಷರು ಮಂಗಳಸ್ವರೂಪರೇ? ಅಮ್ಮ, ನೀನು ಬಾರದೆ ನಾನು ಸರ್ವಥಾ ಲಗ್ನವಾಗಲಾರೆ. ಇದು ಖಂಡಿತ. ನಿನ್ನ ಚರಣಧೂಳಿ ನನ್ನ ಲಗ್ನಮಂಟಪದಲ್ಲಿ ಬಿದ್ದರೆ ಮಾತ್ರ ನಾನು ಪುನೀತ. ನಿನ್ನ ವರದಹಸ್ತ ನನ್ನ ತಲೆಯನ್ನು ಮುಟ್ಟಿದರೆ ನಾನು ಧನ್ಯ. ನೀನು ಅಪಮಂಗಳೆಯಲ್ಲ. ನನ್ನ ಪಾಲಿಗೆ ನೀನು ಸರ್ವಮಂಗಳೆಯಾದ ಭಗವತಿ! ಬಾ!" ಎನ್ನುತ್ತಾ ಸತೀಶ ಕಣ್ಣೀರು ಸುರಿಸಿ ತಾಯಿಯನ್ನು ಕೈಹಿಡಿದು ಮದುವೆಯ ಮಂಟಪಕ್ಕೆ ಕರೆದುಕೊಂಡು ಹೋದ. ಇಂದುವು ಮಗನ ಅಪಾರ

ವಾದ ಭಕ್ತಿಯನ್ನು ಕಂಡು ಆನಂದಪರವಶಳಾದಳು. ನವದಂಪತಿಗಳನ್ನು ತುಂಬುಹೃದಯದಿಂದ ಹರಸಿದಳು.

o o o o o

ಸತೀಶನ ಮಡದಿ ಮನೆಗೆ ಬಂದಿದ್ದಾಳೆ. ಅತ್ತೆಯ ಆನಂದಕ್ಕೆ ಪಾರವಿಲ್ಲ. ಮನೆಕೆಲಸಗಳಲ್ಲಿ ದಕ್ಷಳೂ ಕುಶಲಳೂ ಆದ ಸೊಸೆಯನ್ನು ನೋಡಿ ಮಗನ 'ಆರಿಸುವಿಕೆ'ಯನ್ನು ಪ್ರಶಂಸಿಸುತ್ತಾಳೆ. ಇನ್ನೊಮ್ಮೆ ಸೊಸೆಯನ್ನು ಹರಸುತ್ತಾಳೆ.

ಈಗ ಮನೆಯ ಸರ್ವ ಭಾರವನ್ನೂ ಇಂದು ಸೊಸೆಯ ಮೇಲೆ ಹಾಕಿರುವಳು. ದಿನದ ಹೆಚ್ಚಿನ ಸಮಯವನ್ನು ಭಗವಂತನ ಧ್ಯಾನದಲ್ಲೇ ಕಳೆಯತೊಡಗಿದಳು. ಸಂಸಾರದಲ್ಲಿದ್ದೂ ನಿರ್ಲಿಪ್ತಳಾಗಿ ಕಾಲಕಳೆಯ ತೊಡಗಿದಳು.

Edited, Printed & Published by K. V. Shenoy
at The Prabhat Printers, Ltd., Mangalore.